THE MYSORE LEGISLATIVE ASSEMBLY

SIXTY-FIFTH DAY

Wednesday, the 30th August, 1961.

The House met in the Assembly Hall, Vidhana Soudha, Bangalore, at One of the Clock.

Mr. SPEAKER (Sri S. R. KANTHI, B.A, LL.B.) in the Chair.

STARRED QUESTIONS

(to which oral answers were given)

SANCTION OF AN IRRIGATION WELL TO THE AGRICULTURAL COLONY IN CHINTAMANI TALUK.

*Q.—402. Sri J. NARAYANAPPA (Mulbagal).—

Will the Government be pleased to state :—

(*a*) whether they would consider sanctioning an irrigation wel to the Agricultural Colony, Chintamani Taluk, Kolar District in the interest of agricultural production ;

(*b*) whether they are aware that correspondence regarding the matter started in the year 1952 and estimates also had been prepared ;

(*c*) the time required by them to sanction a well and complete the work ?

*A.—Sri B. D. JATTI (Chief Minister) [on behalf of Sri N. RACHAIAH (Minister for Agriculture and Social Welfare)].—

(*a*) Yes.

(*b*) Yes.

(*c*) Normally it would take two months for according sanction for a well work and thereafter it may take one year for completing the work. In case the estimate required to be revised it may take one more year to complete it.

ಶ್ರೀ ಜೆ. ನಾರಾಯಣಪ್ಪ:—ಸ್ವಾಮಿ ಈ ವ್ಯವಸಾಯ ಕಾರ್ಯಕ್ಕಾಗಿ ಬಾವಿ ಬೇಕೆಂದು ಕೇಳಿ 9 ವರ್ಷವಾಯಿತು, ಇಷ್ಟು ದಿನಗಳಿಂದಲೂ ವ್ಯವಹಾರ ನಡೆಯುತ್ತಾ ಸಾಧಕಬಾಧಕವಾಗಿರುವುದಕ್ಕೆ ಕಾರಣವೇನು ?

†ಶ್ರೀ ಬಿ. ಡಿ. ಜತ್ತಿ:—"Centrally sponsored scheme"ನಲ್ಲಿ ಬಾವಿಗೆ ಅವಕಾಶವಿಲ್ಲ. ಅಲ್ಲಿ ಕೆರೆಇಲ್ಲದಿದ್ದರೆ ಅದನ್ನು ನೋಡಿಕೊಂಡು ಬೇರೆ ಯೋಜನೆಯಲ್ಲಿ ಅಲ್ಲಿಗೆ ಬಾವಿ ಕೊಡಬೇಕೆಂದಿದೆ.

†Indicates that the remarks or speeches have not been revised by the Member concerned.

ಶ್ರೀ ಜೆ. ನಾರಾಯಣಪ್ಪ.—ಹಾಗಿದ್ದರೆ ಇಷ್ಟು ಪಾದಕಾಶವೇಕೆ!.

ಶ್ರೀ ಬಿ. ಡಿ. ಜತ್ತಿ.—ಇದುವರೆಗೆ ಅಂದಾಜಾಗಿತ್ತು, ಅದು ರಿವೈಸ್ ಆಯಿತು. ಹಳೆಯ ಅಂದಾಜಿನ ಪ್ರಕಾರ 12,000 ರೂಪಾಯಿ, ಪುನಃ ಅದು ರಿವೈಸ್ ಆಗಿ 9,600 ರೂಪಾಯಿಗೆ ಆಯಿತು. ಕೇಂದ್ರ ಯೋಜನೆಯ ಪ್ರಕಾರ ಸಾಧ್ಯವಿಲ್ಲವಾಗಿ, ಈಗ ಹೊಸಯೋಜನೆಯ ಪ್ರಕಾರ ಅಲ್ಲಿಗೆ ಒಂದು ಬಾವಿಯನ್ನು ಕೊಡಬೇಕೆಂದಿದೆ.

ಶ್ರೀ ಜೆ. ನಾರಯಣಪ್ಪ.—ಈಗಲೇ ಕೊಟ್ಟರೆ ಅನುಕೂಲವಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಆದು ಕುಡಿಯುವ ನೀರಿನ ಬಾವಿಯಲ್ಲ, ನೀರಾವರಿ ಬಾವಿಯಾದುದರಿಂದ ಯೋಜನೆ ಮಾಡಬೇಕಾಗಿದೆ.

ಶ್ರೀ ಜೆ. ನಾರಾಯಣಪ್ಪ.—ಗೋರಿಬಿದನೂರು, ಮುಳಬಾಗಿಲು ತಾಲ್ಲೂಕುಗಳಲ್ಲಿ ನೀರಾವರಿ ಬಾವಿಗಳನ್ನು ಕೊಟ್ಟಿದ್ದಾರೆ; ಇದು ಸರ್ಕಾರಕ್ಕೆ ಸೇರಿದ್ದು, ಈ ಗ್ರಾಮಕ್ಕೆ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಬಿ. ಡಿ. ಜತ್ತಿ.—ಈಗಿರುವ ಪ್ರಕಾರ ಯೋಜನೆಯಲ್ಲಿ ಕೊಡಲು ಅವಕಾಶವಿಲ್ಲವಾದರೂ ಅಲ್ಲಿಗೆ ಕೊಡಬೇಕೆಂದು ಯೋಜನೆಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾನೂನಿನ ಪ್ರಕಾರ ಕೊಡಬೇಕಾಗಿಲ್ಲವೆಂದು ಹೇಳುತ್ತೀರಿ; ಹಾಗಿದ್ದರೆ ಈ ಕಾರ್ಯೋನ್ಮುಖವನ್ನು ಯಾವ ತತ್ವಕ್ಕನುಸಾರವಾಗಿ ಪ್ರಾರಂಭಮಾಡಿದಿರಿ? ಪ್ರಾರಂಭಮಾಡಿದಮೇಲೆ ಅಲ್ಲಿನ ಜನರಿಗೆ ಅನುಕೂಲಗಳನ್ನು ಕಲ್ಪಿಸಬೇಕಾದುದು ಸರ್ಕಾರದ ಕರ್ತವ್ಯವಲ್ಲವೆ?

ಶ್ರೀ ಬಿ. ಡಿ. ಜತ್ತಿ.—ವ್ಯವಸಾಯ ಕಾರ್ಯೋನ್ಮುಖ ಪ್ರಾರಂಭ ಮಾಡುವ ಉದ್ದೇಶ ಭೂಮಿಯಿಲ್ಲದ ಹರಿಜನರಿಗೆ ಪ್ರತಿಕುಟುಂಬಕ್ಕೆ ಐದರಿಂದ ಹತ್ತು ಎಕರೆ ಜಮೀನು ಕೋಡುವುದು, ಮನೆ ಕಟ್ಟಿಕೊಳ್ಳಲು 400 ರೂಪಾಯಿ ಸಹಾಯ ದ್ರವ್ಯ ಕೋಡುವುದು, ಎತ್ತು ಮುಂತಾದ ವ್ಯವಸಾಯ ಸಲಕರಣೆ ಕೊಂಡುಕೊಳ್ಳಲು 400 ರೂಪಾಯಿ ಸಹಾಯಕೊಡುವುದು. ಕುಡಿಯುವ ನೀರಿನ ಬಾವಿ ಕೊಡಬೇಕೆಂದು ನಿಯಮ ಆದುದರಿಂದ ಸಾಧ್ಯವಾದರೆ, ಯೋಜನೆಯಲ್ಲಲ್ಲದಿದ್ದರೂ ಸರ್ಕಾರ ಅಲ್ಲಿಗೊಂದು ಬಾವಿಯನ್ನು ಕೊಡಬೇಕೆಂದು ಯೋಚನೆಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾರ್ಯೋನ್ಮುಖವನ್ನು ಸರ್ಕಾರ ಪ್ರಾರಂಭಮಾಡಿ, ಅವರಿಗೆ ನೀರಿನ ಸೌಲಭ್ಯವನ್ನೊದಗಿಸದೇಹೋದರೆ ಉದ್ದೇಶವೇ ಸಾರ್ಥಕವಾಗುವುದಿಲ್ಲವಾದುದರಿಂದ ಸರ್ಕಾರ ಈ ತತ್ವವನ್ನಂಗೀಕಾರಮಾಡಿ ಆ ವ್ಯವಸಾಯ ಕಾರ್ಯೋನ್ಮುಖಕ್ಕೆ ನೀರಿನ ಅನುಕೂಲವನ್ನೊದಗಿಸುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಇದು Centrally sponsored scheme ದಲ್ಲಿಲ್ಲವೆಂದು ಹೇಳಿದ್ದೇನೆ. ಆದರೂ ಸರ್ಕಾರ ಸಾಧ್ಯವಾದರೆ ಮಾಡುತ್ತೇವೆ.

ಶ್ರೀ ಮಂಜಪ್ಪ ಉಡ್ಲಾಳ್.—ಹರಿಜನರಿಗೆ ಬಾವಿಗಾಗಿ 400 ರೂಪಾಯಿ ಕೊಡಬೇಕೆಂದು ಯಾವಾಗ ತೀರ್ಮಾನ ಮಾಡಿದಿರಿ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.